ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ಯವರ ನ್ಯಾಯಾಲಯ, ಪೊನ್ನಂಪೇಟೆ, ಕೊಡಗು ಜಿಲ್ಲೆ.

ಕ್ರಿಮಿನಲ್ ಮೊಕದ್ದಮೆ ಸಂ.31/2019.

ಪ್ರಾ. ಸಾ. :-1

| | |
|---|---|
| ಹೆಸರು | :- ರಫೀಕ್ ಸಿ ಹೆಚ್ |
| ತಂದೆಯ ಹೆಸರು | :- ಲೇಟ್. ಅಬ್ದುಲ್ಲಾ. |
| ವಯಸ್ಸು | :- 40 ವರ್ಷ |
| ಉದ್ಯೋಗ | :- ದಿನಸಿ ಅಂಗಡಿ ವ್ಯಾಪಾರ. |
| ವಾಸಸ್ಥಳ | :- ತಿತಿಮತಿ ಗ್ರಾಮ, ವಿರಾಜಪೇಟೆ. |

ಪ್ರಮಾಣೀಕರಿಸಲಾದ ದಿನಾಂಕ :-07-02-2019.

ವಿಚಾರಣೆ : ನ್ಯಾಯಾಲಯದಿಂದ :-

ದಂಡ ಪ್ರಕ್ರಿಯಾ ಸಂಹಿತೆ ಕಲಂ 200 ರಡಿಯಲ್ಲಿ ನ್ಯಾಯಾಲಯದಿಂದ ಸಾಕ್ಷಿಯ ವಿಚಾರಣೆ

ನಾನು 2006ರಿಂದ ಹರೀಶ್‌ರವರ ಮನೆಯಲ್ಲಿ ಬಾಡಿಗೆಗೆ ಇದ್ದೆ. 2006ರಲ್ಲಿ ಬಾಡಿಗೆ ಒಪ್ಪಂದವಾದ ಸಮಯದಲ್ಲಿ ಸದರಿ ಜಾಗದಲ್ಲಿ ಬಾಡಿಗೆ ಮನೆಗೆ ಅಷ್ಟೊಂದು ಬೇಡಿಕೆ ಇರಲಿಲ್ಲ ಆ ಕಾರಣದಿಂದ ಸದರಿ ಮನೆಗೆ ಮುಂಗಡ ಹಣ ಪಡೆದುಕೊಳ್ಳದೆ ಕೇವಲ ಬಾಡಿಗೆಯನ್ನು ಪಡೆದುಕೊಳ್ಳಲು ಒಪ್ಪಿಕೊಂಡು ಆರೋಪಿಯು ನನಗೆ ಅವರ ಮನೆಯನ್ನು ಬಾಡಿಗೆಗೆ ನೀಡಿದ್ದರು. 2006ರಲ್ಲಿ ಸದರಿ ಮನೆಗೆ ನಾನು ಮುಂಗಡ ಹಣವಾಗಿ ನಾನು ಯಾವುದೇ ಹಣವನ್ನು ನೀಡಿರಲಿಲ್ಲ. ಬಾಡಿಗೆಯ ಬಾಪ್ತು ಹಣವನ್ನು ನಾನು ಸದರಿ ಹರೀಶ್‌ರವರಿಗೆ ನಗಧು ರೂಪದಲ್ಲಿ ನೀಡಿರುತ್ತೇನೆ ಮತ್ತು ಒಮ್ಮೊಮ್ಮೆ ಅವರ ಬ್ಯಾಂಕ್ ಖಾತೆಗೆ ಬ್ಯಾಂಕ್‌ಗೆ ಹೋಗಿ ಜಮಾ ಮಾಡಿರುತ್ತೇನೆ. ಕೇವಲ ಬಾಡಿಗೆಯನ್ನು ಮಾತ್ರ ಸು.2-3 ತಿಂಗಳ ಕಾಲ ಪಾವತಿ ಮಾಡಿರುತ್ತೇನೆ. ನಂತರದಲ್ಲಿ ಆರೋಪಿಯು ಸದರಿ ಮನೆಗೆ ಮುಂಗಡ ಹಣ ಬೇಕು ಎಂದು ನನ್ನನ್ನು ಕೇಳಿರುತ್ತಾರೆ. ನನಗೆ ಆರ್ಥಿಕ ಸಮಸ್ಯೆ ಇದ್ದದ್ದರಿಂದ 2011ರ ವರೆಗೂ ನಾನು ಸದರಿ ಹರೀಶ್‌ರವರಿಗೆ ಬಾಡಿಗೆಯನ್ನು ಮಾತ್ರ ಕೊಟ್ಟಿರುತ್ತೇನೆ.

2011ರಲ್ಲಿ ಆರೋಪಿಯು ಸದರಿ ಮನೆಗೆ ಮುಂಗಡ ಹಣವನ್ನು ನೀಡಲೆಬೇಕೆಂದು ಒತ್ತಡವೇರಿರುತ್ತಾರೆ. ಆ ಸಮಯದಲ್ಲಿ ನನ್ನ ತಾಯಿಯವರಿಗೆ ಆರೋಗ್ಯ ಸರಿ ಇಲ್ಲದ ಕಾರಣ ನಾನು ಅವರು ಕೇಳಿದಂತೆ ರೂ.50ಸಾವಿರ ಮುಂಗಡ ಹಣವನ್ನು ಕೊಡಲು ಸಾದ್ಯವಾಗುವುದಿಲ್ಲ ಎಂದು ತಿಳಿಸಿರುತ್ತೇನೆ ಆ ಸಮಯದಲ್ಲಿ ಆರೋಪಿಯು ಹಣ ಕೊಡಲು ಆಗದಿದ್ದರೆ ಭದ್ರತೆಗೆಂದು ಚೆಕ್ ಕೊಡು ಇಲ್ಲದಿದ್ದರೆ ಮನೆ ಖಾಲಿ ಮಾಡು ಎಂದು ತಿಳಿಸಿರುತ್ತಾರೆ. ಆಗ ನಾನು ಆರೋಪಿಗೆ ಸಹಿ ಮಾಡಿದ್ದ 3 ಖಾಲಿ ಚೆಕ್‌ಗಳನ್ನು ನೀಡಿರುತ್ತೇನೆ. ನಾನು ಚೆಕ್ ನೀಡಿದ ನಂತರದಲ್ಲಿ ಆರೋಪಿಯು ನನ್ನ ಬಳಿ ಮುಂಗಡ ಹಣ ಕೇಳಿರುವುದಿಲ್ಲ.

ಆ ನಂತರದಲ್ಲಿ ಆರೋಪಿಯು ಸು.2ವರ್ಷಗಳ ನಂತರ ಪುನಾ ಮುಂಗಡ ಹಣವನ್ನು ನೀಡುವಂತೆ ಕೇಳಿರುತ್ತಾರೆ. ಆಗ ನಾನು ಆರ್ಥಿಕ ಸಮಸ್ಯೆ ಇದ್ದದ್ದರಿಂದ ಮುಂಗಡ ಹಣ ಕೊಡಲು ಸಾದ್ಯವಾಗುವುದಿಲ್ಲ ಎಂದು ತಿಳಿಸಿರುತ್ತೇನೆ. ನಂತರದಲ್ಲಿ ಆರೋಪಿಯು ನಾನು ನೀಡಿದ್ದ 3ಚೆಕ್‌ಗಳ ಪೈಕಿ 2 ಚೆಕ್‌ಗಳನ್ನು ಭರ್ತಿ ಮಾಡಿಕೊಂಡು ಬ್ಯಾಂಕ್‌ಗೆ ಸಲ್ಲಿಸಿ ಅವುಗಳು ಅಮಾನ್ಯಗೊಂಡಿರುತ್ತದೆ. ನಂತರದಲ್ಲಿ ನನ್ನ ವಿರುದ್ಧ ಚೆಕ್ ಅಮಾನ್ಯ ಕೇಸನ್ನು ದಾಖಲು ಮಾಡಿರುತ್ತಾರೆ. ನಾನು ಸದರಿ ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೇನೆ.

ಸದರಿ ಪ್ರಕರಣಗಳು ದಾಖಲಾದ ನಂತರದಲ್ಲಿಯೂ ಸಹಃ ನಾನು ಆರೋಪಿಯ ಮನೆಯಲ್ಲಿಯೇ ಬಾಡಿಗೆಗೆ ಇದ್ದು ಬಾಡಿಗೆ ಹಣವನ್ನು ಆರೋಪಿಗೆ ನೇರವಾಗಿ ನಗದು ರೂಪದಲ್ಲಿ ಮತ್ತು ಅವರ ಬ್ಯಾಂಕ್ ಖಾತೆಗೆ ಬ್ಯಾಂಕ್‌ಗೆ ಹೋಗಿ ಜಮಾ ಮಾಡಿರುತ್ತೇನೆ.

2018ರ ಸೆಪ್ಟೆಂಬರ್‌ನಲ್ಲಿ ನನ್ನ ತಾಯಿಯವರಿಗೆ ಆರೋಗ್ಯ ಇಲ್ಲದಿದ್ದ ಸಮಯದಲ್ಲಿ ನಾನು ನನ್ನ ತಾಯಿಯವರನ್ನು ನೋಡಲು ಕೇರಳಕ್ಕೆ ಹೋಗಿದ್ದೆ. ಆ ಸಮಯದಲ್ಲಿ ನಾನು ನ್ಯಾಯಾಲಯದಲ್ಲಿ ಪ್ರಕರಣಗಳು ಸುನಾವಣೆಗೆ ಇದ್ದ ದಿನದಂದು ನ್ಯಾಯಾಲಯಕ್ಕೆ ಬಂದು ವಾಪಾಸು ಕೇರಳಕ್ಕೆ ಹೋಗುತ್ತಿದ್ದೆ ಆದರೆ ನಾನು ತಿತಿಮತಿಯಲ್ಲಿ ನಾನು ಬಾಡಿಗೆಗೆ ಇದ್ದ ನನ್ನ ಮನೆಗೆ ಹೋಗುತ್ತಿರಲಿಲ್ಲ.

2018ರ ಡಿಸೆಂಬರ್‌ನಲ್ಲಿ ನನ್ನ ಮನೆಯ ಬಳಿ ಬಾಡಿಗೆಗೆ ಇದ್ದಂತಹಃ ಬಶೀರ್ ರವರು ನನಗೆ ದೂರವಾಣಿ ಕರೆ ಮಾಡಿ ನಾನು ಬಾಡಿಗೆಗೆ ಇದ್ದ ಮನೆಯನ್ನು ಬೇರೊಬ್ಬರಿಗೆ ಬಾಡಿಗೆಗೆ ನೀಡಿದ್ದು ಬೇರೆಯವರು ಸದರಿ ಮನೆಯಲ್ಲಿ ವಾಸವಿರುವುದಾಗಿದೆ ಎಂದು ನನಗೆ ತಿಳಿಸಿರುತ್ತಾರೆ. ಈ ವಿಚಾರವನ್ನು ತಿಳಿದ ತಕ್ಷಣ ಮಾರನೇ ದಿನ ನಾನು ತಿತಿಮತಿಗೆ ನನ್ನ ಮನೆಯ ಬಳಿ ಬಂದಿರುತ್ತೇನೆ. ಆ ಸಮಯದಲ್ಲಿ ಆರೋಪಿಯು ಸಹಃ ಮನೆಯ ಬಳಿ ಇದ್ದು ನಾನು ಆರೋಪಿಯನ್ನು ಕುರಿತು ನನ್ನ ಮನೆಯನ್ನು ಬೇರೆಯವರಿಗೆ ಏಕೆ ಬಾಡಿಗೆಗೆ ಕೊಟ್ಟಿರುತ್ತೀರಾ ಎಂದು ಪ್ರಶ್ನಿಸಿರುತ್ತೇನೆ, ಅದಕ್ಕೆ ಆರೋಪಿಯು ನೀನು ಬಾಡಿಗೆ ಹಣ ಕೊಡದ ಕಾರಣ ನಾನು ಬೇರೆಯವರಿಗೆ ಬಾಡಿಗೆಗೆ ನೀಡಿರುತ್ತೇನೆ ಎಂದು ತಿಳಿಸಿರುತ್ತಾರೆ. ಆ ಸಮಯದಲ್ಲಿ ನಾನು ಸು.5-6 ತಿಂಗಳ ಬಾಡಿಗೆಯನ್ನು ಆರೋಪಿಗೆ ನೀಡಿರಲಿಲ್ಲ.

ನಾನು ಮನೆಯ ಹೊರಗಡೆಯಿಂದ ಸದರಿ ಮನೆಯ ಒಳಭಾಗದಲ್ಲಿ ನೋಡಿದ್ದು ನನ್ನ ವಸ್ತುಗಳು ಕಾಣುತ್ತಿರಲಿಲ್ಲ, ನನ್ನ ವಸ್ತುಗಳು ಕಾಣದಿದ್ದಾಗ ನನ್ನ ವಸ್ತುಗಳನ್ನು ಏನು ಮಾಡಿರುತ್ತೀರಾ ಎಂದು ಆರೋಪಿಯನ್ನು ಕೇಳಿದಾಗ ಆರೋಪಿಯು ನನ್ನನ್ನು ಕುರಿತು ನೀನು ಬಾಡಿಗೆ ಕೊಡದಿದ್ದ ಕಾರಣ ವಸ್ತುಗಳ ಬಗ್ಗೆ ನೀನು ಕೇಳುವ ಹಾಗಿಲ್ಲ ಎಂದು ತಿಳಿಸಿರುತ್ತಾರೆ ಹಾಗೂ ಕೇಳಿದರೆ ನಿನಗಾಗಿ ಒಂದು ಬಂದೂಕಿನ ತೋಟವನ್ನು ಖರ್ಚುಮಾಡುತ್ತೇನೆ ಎಂದು ಹೇಳಿ ನನಗೆ ಕೊಲೆ ಬೆದರಿಕೆ ಹಾಕಿರುತ್ತಾರೆ.

ಆರೋಪಿಯ ಕೃತ್ಯದ ಬಗ್ಗೆ ನಾನು ಪೊನ್ನಂಪೇಟೆ ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ. ನಂತರ ಪೊಲೀಸರು ಸದರಿ ಮನೆಯ ಬಳಿ ಬಂದು ಮಹಜರ್ ಬರೆದಿರುತ್ತಾರೆ. ಆದರೆ ಪೊಲೀಸರು ಆರೋಪಿಯ ವಿರುದ್ಧ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಊರಿನವರನ್ನು ವಿಚಾರಿಸಿದಾಗ ಆರೋಪಿಯು ನನ್ನ ವಸ್ತುಗಳನ್ನು ಅವರ ತೋಟದ ಮನೆಯ ಬಳಿ ಇಟ್ಟಿರಬಹುದು ಎಂದು ತಿಳಿಸಿರುತ್ತಾರೆ. ನನ್ನ ಮನೆಯಲ್ಲಿ ಆ ಸಮಯದಲ್ಲಿ ಗ್ಯಾಸ್‌ನ 2 ಸಿಲಿಂಡರ್‌ಗಳು, 1ಸ್ಟೌವ್, ತೇಗದ ಪೀಠೋಪಕರಣಗಳು, ಬಟ್ಟೆಗಳು, ಕುರಾನ್ ಪುಸ್ತಕ, ವಾಚ್, ಸು.6ವರೆ ಸಾವಿರ ಹಣ, ಪಾತ್ರೆಗಳು ಮತ್ತು ಇತ್ಯಾದಿ ವಸ್ತುಗಳು ಇದ್ದವು, ನಂತರದಲ್ಲಿ ಅವು ಕಾಣೆಯಾಗಿರುತ್ತದೆ.

ನನ್ನ ವಿರುದ್ಧ ಆರೋಪಿಯವರು ಸಲ್ಲಿಸಿರುವಂತಹಃ ಚೆಕ್ ಅಮಾನ್ಯ ಪ್ರಕರಣಗಳಲ್ಲಿ ನಾನು ಸದರಿಯವರ ಮನೆಯಲ್ಲಿ ಬಾಡಿಗೆಗೆ ವಾಸವಾಗಿಲ್ಲ ಎಂದು ಆರೋಪಿಯು ಸಾಕ್ಷ್ಯ ನುಡಿದಿರುತ್ತಾರೆ, ಆ ಕಾರಣಕ್ಕಾಗಿ ಆರೋಪಿಯು ಇದ್ದಕ್ಕಿದ್ದಂತೆಯೇ ನನ್ನನ್ನು ಮನೆಯಿಂದ ಹೊರಗೆ ಹಾಕಿ ಬೇರೊಬ್ಬರಿಗೆ ಮನೆಯನ್ನು ಬಾಡಿಗೆಗೆ ನೀಡಿರುತ್ತಾರೆ.

ಆರೋಪಿಯು ನನ್ನ ಮನೆಗೆ ಅಕ್ರಮ ಪ್ರವೇಶ ಮಾಡಿ ನನ್ನ ಚೆಕ್ ಅನ್ನು ದುರುಪಯೋಗ ಪಡಿಸಿಕೊಂಡಿದ್ದು ನನ್ನ ಮನೆಯಲ್ಲಿದ್ದ ವಸ್ತುಗಳನ್ನು ಕಳ್ಳತನ ಮಾಡಿದ್ದು ನನಗೆ ಕೊಲೆ ಬೆದರಿಕೆಯನ್ನು ಹಾಕಿರುತ್ತಾರೆ. ಆದ್ದರಿಂದ ಆರೋಪಿಯ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬೇಕೆಂದು ಕೋರುತ್ತೇನೆ.

ಈ ಹಂತದಲ್ಲಿ ಮುಂದುವರೆದ ಸಾಕ್ಷ್ಯ ನುಡಿಯುವುದಕ್ಕಾಗಿ ಕಾಲವಕಾಶವನ್ನು ಕೋರಿದ್ದು, ಕಾಲವಕಾಶವನ್ನು ನೀಡಲಾಯಿತು.

ಓ. ಹೇ. ಕೇ. ಸ. ಇ. ಎ. ಒ.

ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ಪೊನ್ನಂಪೇಟೆ.